# ಆಲಿಯಾ-ಸಿದ್ಧಾರ್ಥ ಸುತ್ತಾಟ



'ಸ್ಟೂಡೆಂಟ್ ಆಫ್ ದಿ ಇಯರ್' ಚಿತ್ರದ ಮೂಲಕ ಮೊದಲ ಬಾರಿಗೆ ತೆರೆ ಹಂಚಿಕೊಂಡ ಅಲಿಯಾ ಭಟ್ ಮತ್ತು ಸಿದ್ಧಾರ್ಥ್ ಮಲ್ಹೋತ್ರಾ ಗೆಳೆತನ ಕ್ಯಾಮೆರಾದಾಚೆಗೂ ಬೆಳೆದಿದ್ದು ಗುಟ್ಟಾಗೇನೂ ಉಳಿದಿಲ್ಲ. ಎರಡೂ ಮುಖಗಳು ಹೊಸತಾಗಿದ್ದರಿಂದ ಸಿನಿಮಾ ಪ್ರಿಯರೂ ಈ ಜೋಡಿಯನ್ನು ಮೆಚ್ಚಿಕೊಂಡಿದ್ದರು. ಇಬ್ಬರದ ಸ್ನೇಹ ಪ್ರೀತಿಗೆ ತಿರುಗಿದೆ ಎಂದು ಬಿ–ಟೌನ್ ಮಾತನಾಡಿಕೊಳ್ಳುತ್ತಿದ್ದರೂ, ಅಲಿಯಾ ಮತ್ತು ಸಿದ್ಧಾರ್ಥ್ ಅದರ ಕುರಿತು ಬಹಿರಂಗವಾಗಿ ಮಾತನಾಡಿಲ್ಲ. ನಿರಾಕರಿಸುವ ಗೋಜಿಗೂ ಹೋಗಿಲ್ಲ.

ಸುದ್ದಿ ಪ್ರಿಯರು ಎಷ್ಟೇ ಬೆನ್ನತ್ತಿದರೂ ಈ ಜೋಡಿ ರಹಸ್ಯವಾಗಿ ಅಲ್ಲಲ್ಲಿ ಸುತ್ತಾಡುತ್ತದೆ. ಮೂಲಗಳ ಪ್ರಕಾರ ಇಬ್ಬರ ಗೆಳೆತನ ಗಾಢವಾಗಿದೆ. ಈಗ ಇಬ್ಬರೂ ಸಹಬಾಳ್ವೆಯ (ಲಿವಿಂಗ್ ಟುಗೆದರ್) ಜೀವನ ಪ್ರಾರಂಭಿಸಿದ್ದಾರೆ. ಅಲಿಯಾ ಬಿಡುವಿನ ದಿನಗಳನ್ನು ಬಾಂದ್ರಾದಲ್ಲಿರುವ ಸಿದ್ಧಾರ್ಥನ ಮನೆಯಲ್ಲಿಯೇ ಕಳೆಯುತ್ತಿದ್ದಾಳೆ. ವಿದೇಶದಲ್ಲಿ ಸುತ್ತಾಡಿಕೊಂಡು ಬರುತ್ತಾರೆ.

ಇತ್ತೀಚೆಗಷ್ಟೇ ಇಬ್ಬರೂ ನ್ಯೂಯಾರ್ಕ್‌ನ ಬೀದಿಗಳಲ್ಲಿ ಸುತ್ತುತ್ತಿದ್ದರು ಎನ್ನುವುದು ಬಿ–ಟೌನ್ ಗಲ್ಲಿಯಿಂದ ಬಂದ ಸುದ್ದಿ. ನ್ಯೂಯಾರ್ಕ್‌ನಲ್ಲಿರುವ ಫ್ಯಾಷನ್ ವಿನ್ಯಾಸಕಾರ ಪ್ರಬಾಲ್ ಗುರುಂಗ್, ಅಲಿಯಾ ಜೊತೆಗಿರುವ ಚಿತ್ರವನ್ನು ಜಾಲತಾಣದಲ್ಲಿ ಹಂಚಿಕೊಂಡಿದ್ದ. ನೋಡಿದವರು ಅಲಿಯಾ ಫ್ಯಾಷನ್ ಕಾರ್ಯಕ್ರಮದಲ್ಲಿ ಭಾಗವಹಿಸಿರಬೇಕೆಂದು ಊಹೆ ಮಾಡಿದ್ದರು. ಕೆಲ ನಿಮಿಷಗಳಲ್ಲಿಯೇ ಗುರುಂಗ್ ಪೋಸ್ಟ್ ಮಾಡಿದ ಮತ್ತೊಂದು ಚಿತ್ರ ನೋಡಿದ ಅನೇಕರು ಬೆರಗಾಗಿದ್ದರು. ಚಿತ್ರದ ಫ್ರೇಮಿನೊಳಗೆ ಸಿದ್ಧಾರ್ಥ್ ಕೂಡ ಇಣುಕಿದ್ದ. ಆಗಲೇ ಗೊತ್ತಾಗಿದ್ದು, ಇಬ್ಬರೂ ರಜೆ ದಿನದ ಮೋಜಿಗಾಗಿ ಕದ್ದುಮುಚ್ಚಿ ಅಮೆರಿಕಕ್ಕೆ ಹಾರಿದ್ದಾರೆಂದು.



## ಸಂತೃಪ್ತೆ ಜೂಹಿ!

ಚಿತ್ರರಂಗದಲ್ಲಿ ಸಂಭಾವನೆ ತಾರತಮ್ಯದ ಕುರಿತ ಕೂಗು ಇಂದು ನಿನ್ನೆಯದಲ್ಲ. 'ನಾಯಕರಿಗಿಂತ ನಾವೇನೂ ಕಮ್ಮಿಯಿಲ್ಲ. ನಮ್ಮ ಹೆಸರಿನಿಂದಲೂ ಸಿನಿಮಾಗಳು ಗೆಲ್ಲುತ್ತಿವೆ. ಅವರಿಗೆ ಕೊಡುವ ಕೋಟಿಗಟ್ಟಲೆ ಸಂಭಾವನೆ ನಮಗೇಕಿಲ್ಲ?' ಎಂದು ನಟಿಯರು ಆಗಾಗ ಕೇಳುತ್ತಿದ್ದಾರೆ. ಕೆಲವು ನಟೀಮಣಿಯರು ಈಗಾಗಲೇ ದೊಡ್ಡ ಮೊತ್ತದ ಸಂಭಾವನೆಯನ್ನು ಪಡೆಯುತ್ತಿದ್ದಾರೆ. ಕಡಿಮೆ ಕೊಟ್ಟರೂ ಕೆಲವರು ಒಪ್ಪಿಕೊಳ್ಳುವ ಅನಿವಾರ್ಯತೆಯಲ್ಲಿದ್ದಾರೆ.

ಆದರೆ ಜೂಹಿ ಚಾವ್ಲಾ ಹೇಳುವುದೇ ಬೇರೆ. ಖ್ಯಾತಿಯ ಉತ್ತುಂಗದಲ್ಲಿದ್ದ ಕಾಲದಲ್ಲಿಯೂ ತನ್ನಂತಹ ನಟಿಯರು ಸಂಭಾವನೆ ಅಸಮಾನತೆಯಿಂದ ಬೇಸರಗೊಂಡಿರಲಿಲ್ಲ. ಅದು ದೊಡ್ಡ ಕೊರತೆ ಅಥವಾ ಅನ್ಯಾಯ ಎಂದೂ ಅನಿಸಿರಲಿಲ್ಲ.. ಎನ್ನುತ್ತಾಳೆ ಆಕೆ. ಪುರುಷ ಕಲಾವಿದರು ತನಗಿಂತ ಹೆಚ್ಚು ಸಂಭಾವನೆ ಪಡೆಯುವುದನ್ನು ಬೇಸರವಿಲ್ಲದೆ ಒಪ್ಪಿಕೊಂಡಿದ್ದೆ ಎಂದಿದ್ದಾಳೆ ಜೂಹಿ ಚಾವ್ಲಾ.

ಆದರೆ ಸಂಭಾವನೆಯಲ್ಲಿನ ಅಂತರವನ್ನು ತಗ್ಗಿಸಲು ಇದು ಸಕಾಲ ಎನ್ನುವುದು ಜೂಹಿ ಅಭಿಪ್ರಾಯ. 'ಆದರದು ಅಷ್ಟು ಸುಲಭವಲ್ಲ. ರಾತ್ರಿ ಬೆಳಗಾಗುವುದರೊಳಗೆ ಯಾವುದೂ ಬದಲಾಗದು. ವ್ಯತ್ಯಾಸವೆಂದರೆ ಈಗಿನ ಕಲಾವಿದರು ತಮ್ಮನ್ನು ಬಳಸಿಕೊಳ್ಳುವ ಪ್ರಮಾಣಕ್ಕಿಂತಲೂ ಅಧಿಕ ಮಟ್ಟದ ವೇತನ ಪಡೆಯುತ್ತಿದ್ದಾರೆ. ಅದೇ ರೀತಿ ಭವಿಷ್ಯದಲ್ಲಿ ನಟ ನಟಿಯರು ಇನ್ನೂ ಹೆಚ್ಚು ಪಡೆಯಲಿದ್ದಾರೆ' ಎನ್ನುವುದು ಆಕೆಯ ಅಭಿಮತ.

'ನಮ್ಮ ಕಾಲದಲ್ಲಿಯೂ ನಾಯಕಿ ಪ್ರಧಾನ ಚಿತ್ರಗಳು ಬಂದಿದ್ದವು. ಮಾಧುರಿ ದೀಕ್ಷಿತ್, ಮನಿಶಾ ಕೊಯಿರಾಲರಂತಹ ನಟಿಯರು ಅಂತಹ ಸಿನಿಮಾಗಳಲ್ಲಿ ನಟಿಸಿದ್ದರು. ಆದರೆ ನಾಯಕಿ ಪ್ರಧಾನ ಸಿನಿಮಾಗಳ ಸಂಖ್ಯೆ ತೀರಾ ಕಡಿಮೆ' ಎಂದು ಸಿನಿಮಾರಂಗದಲ್ಲಿನ ಅಸಮಾನತೆಯನ್ನು ವ್ಯಾಖ್ಯಾನಿಸಿದ್ದಾಳೆ ಜೂಹಿ.

■ ಅಮಿ